**ಸಿಸಿ ನಂ.187/2023**

**ಚಾಸಾ-4**

**ಪ್ರಾಸಾ-2**

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ ,**

**ಧಾರವಾಡ.**

**ಸಾಕ್ಷಿದಾರನ ಹೆಸರುಃ** **ಈರಪ್ಪ**

**ತಂದೆಯ ಹೆಸರುಃ** **ಬಸಪ್ಪ ಪಟ್ಟಣಶೆಟ್ಟಿ**

**ವಯಸ್ಸುಃ** **40 ವರ್ಷ**

**ಉದ್ಯೋಗಃ** **ಒಕ್ಕಲುತನ**

**ವಾಸಸ್ಥಳಃ** **ಅಮ್ಮಿನಬಾವಿ**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ.06.08.2024**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಈಗ ಎರಡುವರೆ ವರುಷದ ಹಿಂದೆ ಪೋಲಿಸರು ಅಪಘಾತವಾದ ವಿಚಾರಕ್ಕಾಗಿ ಪೋಲಿಸರು ಹಾರೊಬೆಳವಡಿ ಹತ್ತಿರ ಅಪಘಾತವಾದ ಸ್ಥಳಕ್ಕೆ ಕರೆದುಕೊಂಡು ಹೊಗಿದ್ದರು. ಆಗ ಪೋಲಿಸರು ಜಾಗ ತೊರಿಸಿ ಪಂಚನಾಮೆ ಮಾಡಿ ನಮ್ಮ ಫೋಟೊ ತೆಗೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ಘಟನಾ ಸ್ಥಳವನ್ನು ಹೊರತು ಪಡಿಸಿ ಬೇರೆ ಎಲ್ಲೂ ನನ್ನ ಸಹಿ ಪಡೆದಿಲ್ಲ. ಸಾಕ್ಷಿ ಪಂಚನಾಮೆಯನ್ನು ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**3** ಎಂದು ಗುರುತಿಸಲಾಗಿದ್ದು **,** ಸಾಕ್ಷಿಯ ಸಹಿಯನ್ನು ನಿಪಿ.**3(**ಸಿ**)** ಎಂದು ಗುರುತಿಸಲಾಯಿತು**.** ಕಚ್ಚಾ ನಕ್ಷೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.**2** ಎಂದು ಗುರುತಿಸಲಾಗಿದ್ದು **,** ಸಾಕ್ಷಿಯ ಸಹಿಯನ್ನು ನಿಪಿ.**2(**ಬಿ**)** ಎಂದು ಗುರುತಿಸಲಾಯಿತು**.** ಸಾಕ್ಷಿ ನಿಪಿ.**4** ನ್ನು ನೊಡಿ ಗುರುತಿಸಿರುತ್ತಾರೆ**.** ಸಾಕ್ಷಿ ನಿಪಿ**.** **5** ರಿಂದ **7** ಫೋಟೊ ಗಳನ್ನು ನೊಡಿ ಗುರುತಿಸಿರುತ್ತಾರೆ. ಸದರಿ ಫೋಟೊ ದಲ್ಲಿರುವ ಚಕ್ಕಡಿ ಮತ್ತು ಎತ್ತುಗಳು ಅಪಘಾತಕ್ಕೆ ಒಳಗಾದವು ಎಂದು ಹೇಳುತ್ತಾರೆ. ನನ್ನ ಸಮಕ್ಷಮ ಏನು ಜಪ್ತಿ ಮಾಡಿರುವುದಿಲ್ಲ. ನಿಪಿ.1 ನ್ನು ಹೊರತುಪಡಿಸಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**14** ಎಂದು **,** ಸಾಕ್ಷಿಯ ಸಹಿಯನ್ನು ನಿಪಿ.**14(**ಎ**)** ಎಂದು ಗುರುತಿಸಲಾಯಿತು**.** ಅದನ್ನು ಸಹ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.14 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಚಾಸಾ-4**

**ಪ್ರಾಸಾ-2**

**( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ದಿಃ 09.02.2022 ರಂದು ಮದ್ಯಾಹ್ನ 3.00 ರ ಸಮಯದಲ್ಲಿ ಗ್ರಾಮಿಣ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಗೂಳಪ್ಪನ ರಕ್ತದ ಮಾದರಿಯನ್ನು ಜಪ್ತು ಮಾಡಿ ನಿಪಿ.14 ರಂತೆ ಪಂಚನಾಮೆ ಮಾಡಿದರು ಎಂದರೆ ಸರಿ. ಸ್ಥಳ ಪಂಚನಾಮೆ ಕಾಲಕ್ಕೆ ಅಪಘಾತಪಡಿಸಿದ ವಾಹನದ ಚೂರುಗಳನ್ನು ಜಪ್ತು ಮಾಡಿಕೊಂಡರು ಎಂದರೆ ಸರಿ. ಸದರಿ ತುಂಡುಗಳಲ್ಲಿ ಮಹಿಂದ್ರಾ ಎಂದು ಹೆಸರು ಬರೆದಿತ್ತು ಎಂದರೆ ಸರಿ.

ಮುದ್ದೆಮಾಲು ಗುರುತಿಸುವಿಕೆಗಾಗಿ ಮುಂದೂಡಲಾಯಿತು.

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ)**

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ.